ಆ) ಬಂದಿದೆ.

ಇ) ಬಂದ ಮನವಿಗಳನ್ನು ಪುರಸ್ಕರಿಸಿ ಮುಂಡಳಿ ಸಬ್ ಮರ್ಸಿಬಲ್ ಪಂಪುಗಳಿಗೆ ಕಡ್ಡಾಯಗೊಳಿಸಿ ಹೆಚ್.ಡಿ.ಪಿ.ಇ. ಆರ್.ಪಿ.ವಿ.ಸಿ. ಪೈಪುಗಳ ನಿಬಂಧನೆಯನ್ನು ಸಡಿಲಗೊಳಿಸಿ ಹೆಚ್.ಡಿ.ಪಿ.ಇ. ಆರ್.ಪಿ.ವಿ.ಸಿ, ಅಥವಾ ಜಿ.ಐ. ಪಂಪುಗಳಲ್ಲಿ ಯಾವುದಾದರೊಂದನ್ನು ಅಳವಡಿಸುವುದನ್ನು ಗ್ರಾಹಕರ ಇಚ್ಛೆಗೆ ಬಿಡಲು ತೀರ್ಮಾನಿಸಿದ್ದು ಈ ಬಗ್ಗೆ ಮುಂಡಳಿ ೧೧–೨–೧೯೮೮ರಂದು ಸೂಕ್ತ ಆದೇಶ ನೀಡಿದ್ದು ಸಬ್ ಮರ್ಸಿಬಲ್ ಪಂಪುಗಳ ಗ್ರಾಹಕರು ಈಗ ಈ ಮೂರರಲ್ಲಿ ತಮಗೆ ಇಚ್ಛೆ ಬಂದ ಪೈಪುಗಳನ್ನು ಅಳವಡಿಸಬಹುದು.

ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಎರಡು ಬಾರಿ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಮತ್ತೆ ಮತ್ತೆ ಇದೇ ಪ್ರಶ್ನೆಯನ್ನು ಏತಕ್ಕೆ ಕೇಳಿದ್ದಾರೋ ಗೊತ್ತಿಲ್ಲ.

೧೧–೩೦ ಎ. ಎಂ.

ಶ್ರೀ ಬಿ. ಆರ್. ನೀಲಕಂಠಪ್ಪ — ಅಧ್ಯಕ್ಷರೆ ಹೆಚ್.ಡಿ.ಪಿ.ಇ. ಆರ್.ಪಿ.ವಿ.ಸಿ. ಮತ್ತು ಜಿ.ಐ. ಪೈಪುಗಳನ್ನು ಮಾತ್ರ ಅಳವಡಿಸಬೇಕೆಂದು ಹೇಳಿದ್ದಾರೆ. ಇದನ್ನು ಬಿಟ್ಟು ಇನ್ನೂ ಕೆಲವು ಉದ್ಯಮಿಯವರು ಹೊಸದಾಗಿ ಒಳ್ಳೆಯ ಪೈಪ್‌ಗಳನ್ನು ಮಾಡಿದರೆ ಅದನ್ನು ಕೂಡ ಉಪಯೋಗಿಸಲು ಏತಕ್ಕೆ ಅವಕಾಶವನ್ನು ಮಾಡಿಕೊಡಬಾರದು ? ಕೇವಲ ಮೂರು ವಿಷಯಗಳಲ್ಲಿ ಮಾತ್ರ ಕೊಂಡು ಕೊಳ್ಳಬೇಕೆಂದು ಏತಕ್ಕೆ ಇಟ್ಟುಕೊಂಡಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ — ಇವುಗಳಲ್ಲದೇ ಇನ್ನೂ ಯಾವ ತರಹದ ಪೈಪ್‌ಗಳು ಇವೆಯೋ ಅದು ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್‌ನ ಯಾವ ಪೈಪ್‌ನ್ನಾದರೂ ಈಗ ಉಪಯೋಗ ಮಾಡಬಹುದು. ಜನರು ತಮಗೆ ಅನುಕೂಲವಾದಂಥ ಯಾವ ಪೈಪ್‌ನ್ನಾದರೂ ಉಪಯೋಗಿಸಿಕೊಳ್ಳಬಹುದು. ಜಿ.ಐ. ಪೈಪ್‌ನ ಉಪಯೋಗಿಸುವುದನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಹೇಳಿದುದು ಏಕೆ ಅಂದರೆ, ಆ ಪೈಪ್‌ಗಳಲ್ಲಿ ಐದಾರು ವರ್ಷಗಳಾದ ಮೇಲೆ ಒಳಗಡೆ ತುಕ್ಕು ಹಿಡಿದು ಪ್ರಿಕ್ಷನ್‌ಲಾಸ್ ಜಾಸ್ತಿಯಾಗಿ ಹೆಚ್ಚಿನ ಹೈಪವರ್ ಬೇಕಾಗುತ್ತದೆ. ನೀರು ಕಡಿಮೆಯಾಗಿ ಆದರಿಂದ ವಿದ್ಯುಚ್ಛಕ್ತಿಯು ನಷ್ಟವೂ ಉಂಟಾಗುತ್ತವೆ. ಆ ದೃಷ್ಟಿಯಿಂದ ಪಿ.ವಿ.ಸಿ. ಮತ್ತು ಹೆಚ್‌ಡಿಪಿಇ ಪೈಪ್‌ನ್ನು ಉಪಯೋಗಿಸ ತಕ್ಕಂಥಾದ್ದನ್ನು ಆರ್‌ಎಸಿಯವರ ಒತ್ತಾಯದ ಮೇರೆಗೆ ಮಾಡಿದ್ದೇವೆ. ನಮ್ಮ ರೈತರು ಅದಕ್ಕೆ ಬಹಳ ವಿರೋಧ ಮಾಡಿದುದರಿಂದ, ವಿರೋಧ ವ್ಯಕ್ತಪಡಿಸಿದ್ದ ಕಾರಣ ಜಿ.ಐ. ಮತ್ತು ಮೊದಲು ಹೇಳಿದ ಮೂರರಲ್ಲಿ ಯಾವುದಾದರೂ ಒಂದನ್ನು ಉಪಯೋಗಿಸಿ ಎಂದು ಹೇಳಿ ನಾವು ಕಂಪನಿಯವರಿಗೆ ಅವರ ತಯಾರಿಕೆಯನ್ನು ಪಾಪ್ಯುಲರೈಸ್ ಮಾಡಿಕೊಳ್ಳಲಿಕ್ಕೆ ಹೇಳಿದ್ದೇವೆ. ಎಲ್ಲಾ ಕಡೆಗಳಿಗೂ ಹೋಗಿ ಅಲ್ಲಿರುವ ರೈತರನ್ನು ಕರೆಯಿಸಿ, ಅವರಿಗೆ ಇದರ ಉಪಯುಕ್ತತೆಯನ್ನು ತಿಳಿಸಿ ಹೇಳುವಂತೆ ಡೆಮಾನ್ಸ್‌ಟ್ರೇಶನ್ ಮಾಡಿ ಎಂದು ಕೂಡ ಹೇಳಿದ್ದೇವೆ. ನಿಮ್ಮ ಡೆಮಾನ್ಸ್ಟ್ರೇಷನ್‌ನಿಂದ ರೈತರಿಗೆ ಇದರ ಅನುಕೂಲತೆಯ ಬಗ್ಗೆ ಅರಿವು ಆಗಬೇಕು ಎಂದು ಹೇಳಿದ್ದೇವೆ. ಆದುದರಿಂದ ಮುಂಡಳಿಯ ೧೧–೨–೧೯೮೮ರ ಆದೇಶದ ಪ್ರಕಾರ ಮೂರರಲ್ಲಿ ಯಾವ ಪೈಪ್‌ನ್ನು ಬೇಕಾದರೂ ಗ್ರಾಹಕರು ಅಳವಡಿಸಬಹುದು.

## ಗ್ರಾಮಾಂತರ ವಿದ್ಯುದ್ದೀಕರಣದ ಕುರಿತು.

೧೫೬೮. ಶ್ರೀ ಜಿ. ರಾಮದಾಸ್ (ಹೊಸದುರ್ಗ) — ಮಾನ್ಯ ರಾಜ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗ್ರಾಮಾಂತರ ವಿದ್ಯುದ್ದೀಕರಣಕ್ಕಾಗಿ ಸರ್ಕಾರದವರು ಯಾವುದಾದರೂ ಯೋಜನೆಯನ್ನು ರೂಪಿಸಿದ್ದಾರೆಯೇ,

ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನ ಜಾನಕಲ್ ಮೂಡ್ಲಾಜೋವಿ ಹಟ್ಟಿಯಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟು ಒಂದೂವರೆ ವರ್ಷವಾದರೂ ಇನ್ನೂ ವಿದ್ಯುತ್ ಸಂಪರ್ಕವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕೆಲಸ ನಿಧಾನವಾಗಲು ಹೊಸದುರ್ಗ ವಿದ್ಯುತ್ ಅಧಿಕಾರಿಗಳ ಅಲಕ್ಷವೇ ಕಾರಣವಾದ್ದರಿಂದ ಸರ್ಕಾರವು ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವರೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಗ್ರಾಮಾಂತರ ವಿದ್ಯುದ್ದೀಕರಣವನ್ನು ತ್ವರಿತವಾಗಿ ಮಾಡಲು ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಆರ್ಥಿಕ ನೆರವು ಪಡೆದು ಗ್ರಾಮಗಳಿಗೆ ವಿದ್ಯುದ್ದೀಕರಣವನ್ನು ಮಾಡಲಾಗುತ್ತದೆ.

ಆ) ಜಾನಕಲ್ ಗ್ರಾಮದ ಉಪಗ್ರಾಮವಾದ ಮೂಡ್ಲು ಬೋವಿ ಹಟ್ಟಿಯ ವಿದ್ಯುದ್ದೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ೧೯೮೭-೮೮ರಲ್ಲಿ ಪ್ರಗತಿಯಲ್ಲಿದ್ದ ಇನ್ನೆರಡು ಉಪಗ್ರಾಮಗಳ ವಿದ್ಯುದ್ದೀಕರಣ ಪೂರ್ಣಗೊಂಡಿದ್ದು ಮೂಡ್ಲಾ ಬೋವಿ ಹಟ್ಟಿ ಕಾರ್ಯವು ಪ್ರಗತಿಯಲ್ಲಿದೆ. ಬಾಕಿ ಇರುವ ಕೆಲಸವನ್ನು ಇನ್ನು ಎರಡು ತಿಂಗಳುಗಳಲ್ಲಿ ಮಾಡಿ ಮುಗಿಸಿ ಉಪಗ್ರಾಮ ವಿದ್ಯುದ್ದೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಇ) ರಾಜ್ಯದಲ್ಲಿ ಕಂದಾಯ ಗ್ರಾಮಗಳ ಶೇಕಡ ನೂರರಷ್ಟು ವಿದ್ಯುದ್ದೀಕರಣ ಸಾಧಿಸುವ ಕಾರ್ಯಕ್ರಮವಿದ್ದುದರಿಂದ ಉಪಗ್ರಾಮಗಳ ವಿದ್ಯುದ್ದೀಕರಣಕ್ಕೆ ತರುವಾಯ ಆದ್ಯತೆ ಕೊಡಲಾಗುತ್ತದೆ. ೧೯೮೭-೮೮ರಲ್ಲಿ ಹೊಸದುರ್ಗ ತಾಲ್ಲೂಕಿಗೆ ಉಪಗ್ರಾಮ ವಿದ್ಯುದ್ದೀಕರಣಕ್ಕೆ ನಿಗದಿ ಮಾಡಲಾಗಿದ್ದ ಗುರಿ ಒಂದು ಮಾತ್ರ. ಈ ತಾಲ್ಲೂಕಿನಲ್ಲಿ ಎರಡು ಉಪಗ್ರಾಮಗಳ ವಿದ್ಯುದ್ದೀಕರಣ ಸಾಧಿಸಲಾಗಿದೆ. ಆದ್ದರಿಂದ ಅಧಿಕಾರಿಗಳ ಅಲಕ್ಷದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಮದಾಸ್.—ಅಧ್ಯಕ್ಷರೇ, ಈಗ ನಮ್ಮ ಕ್ಷೇತ್ರದಲ್ಲಿ ಗ್ರಾಮೀಣ ವಿದ್ಯುದ್ದೀಕರಣ ಮಂಜೂರು ಆಗಿರತಕ್ಕಂಥಾದ್ದರಲ್ಲಿ ೧೭ ಕೆಡೆಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿನ ಬೋವಿ ಕಾಲೋನಿ, ಲಂಬಾಣಿ ತಾಂಡಾ, ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು ಇಂತಹ ಯೋಜನೆಯಡಿಯಲ್ಲಿ ವರ್ಷಕ್ಕೆ ಎಷ್ಟು ಗ್ರಾಮಗಳಿಗೆ ಮಾತ್ರ ವಿದ್ಯುತ್ ಕೊಡುತ್ತೇವೆ ಎಂದು ನಿಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ. ಹೀಗೆ ಉದಾಸೀನ ಮಾಡದೇ, ನಾನು ಮೇಲೆ ಹೇಳಿದ ಬೋವಿ ಕಾಲೋನಿ ಮತ್ತು ಲಂಬಾಣಿ ತಾಂಡಗಳಿಗೆ ಕೂಡಲೇ ವಿದ್ಯುತ್ ಒದಗಿಸುವ ಕಾರ್ಯವನ್ನು ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ, ಈ ಮೈನರ್ ವಿಲೇಜಸ್ ಅಂದರೆ ಕಂದಾಯ ಹಳ್ಳಿಗಳು ಏನಿವೆ, ಅವುಗಳ ವಿದ್ಯುದ್ದೀಕರಣ ಕಾರ್ಯವನ್ನು ಈ ವರ್ಷದ ಕೊನೆಯೊಳಗಾಗಿ ಮುಗಿಸಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದೇರೀತಿಯಲ್ಲಿ ಮಾಡಿ ಪೂರೈಸುತ್ತಿದ್ದೇವೆ ಅವುಗಳು ಆದಮೇಲೆ ಉಳಿದಿರತಕ್ಕಂಥ ಹ್ಯಾಮ್ಲೆಟ್ಸ್ ಏನಿವೆ ಇದಷ್ಟಲ್ಲಿ ಗೊಲ್ಲರ ಹಟ್ಟಿ ಬರಬಹುದು, ಲಂಬಾಣಿ ತಾಂಡ ಬರಬಹುದು, ಅವುಗಳಿಗೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಿಸುತ್ತೇವೆ. ಒಂದೊಂದು ಜಿಲ್ಲೆಯಲ್ಲಿ ಕೆಲವು ಗ್ರಾಮಗಳನ್ನು ಆರ್.ಎ.ಸಿ.ಯಲ್ಲಿ ಸ್ಪೆಷಲ್ ಆಗಿ ತೆಗೆದುಕೊಂಡು ವಿದ್ಯುದ್ದೀಕರಣ ಮಾಡಬೇಕೆಂದು ಒಂದು ಯೋಜನೆಯನ್ನು ಮಾಡಿ ಕಳುಹಿಸಿದ್ದೇವೆ. ಅದು ಮಂಜೂರು ಆಗಿ ಬಂದ ಮೇಲೆ ಅದಕ್ಕೆ ಆದ್ಯತೆಯನ್ನು ಕೊಟ್ಟು ಮಾಡಿಕೊಡುತ್ತೇವೆ.

ಶ್ರೀ ಜಿ.ರಾಮದಾಸ್.—ತಾಲ್ಲೂಕಿನ ಭಾಗಗಳಲ್ಲಿ ವಿದ್ಯುಚ್ಛಕ್ತಿ ಅಧಿಕಾರಿಗಳು ಸರಕಾರ ನಿಗದಿ ಮಾಡಿದ ವೇಳೆಯಲ್ಲಿ ಅಲ್ಲದೆ ಬೇರೆ ವೇಳೆಯಲ್ಲಿಯೂ ಕೂಡ ಹೆಚ್ಚಿಗೆಗೆ ವಿದ್ಯುತ್‌ನ್ನು ನಿಲ್ಲಿಸುತ್ತಿದ್ದಾರೆ ಅದಕ್ಕೆ ಕಾರಣ ಏನು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆಲವು ಕಾಲದಲ್ಲಿ ಲೋಡ್ ಷೆಡ್ಡಿಂಗ್ ಮಾಡುತ್ತಾ ಇರುತ್ತಾರೆ. ಕೆಲವು ಸಾರಿ ಬೇರೆ ಸಂದರ್ಭಗಳಲ್ಲಿಯೂ ಸಹ ವಿದ್ಯುಚ್ಛಕ್ತಿ ಹೋಗುತ್ತದೆ. ಕಾರಣ ಅಂದರೆ, ಈ ವ್ಯವಸ್ಥೆಯ ಮೇಲೆ ಒತ್ತಡ ಜಾಸ್ತಿ ಬಂದಾಗ ನಾವು ಏನೂ ಉತ್ಪಾದನೆ ಮಾಡುತ್ತೇವೆಯೋ ಅದಕ್ಕಿಂತ ಹೆಚ್ಚಿಗೆ ಉಪಯೋಗವನ್ನು ಜನ ಮಾಡುತ್ತಾ ಇರುವುದರಿಂದ ಉಪಯೋಗಿಸತಕ್ಕಂಥ ಸಲಕರಣೆಗಳ ಮೇಲೆ ಲೋಡ್ ಬಂದಾಗ ನಾವು ಅಗತ್ಯವಾಗಿ ವಿದ್ಯುಚ್ಛಕ್ತಿ ಪೂರೈಕೆಯನ್ನು ನಿಲ್ಲಿಸ ಬೇಕಾಗುತ್ತದೆ. ಇಲ್ಲದಿದ್ದರೆ, ಟ್ರಾನ್ಸ್‌ಫಾರ್ಮರ್, ಬ್ರೇಕರ್ಸ್, ಅಥವಾ ಲೈನ್ ಇರಬಹುದು ಅವೆಲ್ಲವೂ ಕೂಡ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿ ಸರಬರಾಜನ್ನು ನಿಲ್ಲಿಸಬೇಕಾಗಿ ಬರಬಹುದು. ಆದಕ್ಕೋಸ್ಕರವಾಗಿ ಅತ್ಯಗತ್ಯ ಸಂದರ್ಭಗಳಲ್ಲಿ ಕಡಿತ ಮಾಡುವುದು ಅನಿವಾರ್ಯವಾಗಿದೆ.

ಶ್ರೀ ಜಿ ರಾಮದಾಸ್.—ಅಧ್ಯಕ್ಷರೇ ಅಲ್ಲಿ ಕುಡಿಯುವ ನೀರಿನ ಸರಬರಾಜಿಗೆ ತುಂಬಾ ತೊಂದರೆಯಾಗುತ್ತಿದೆ ಸರ್ಕಾರದವರು ಕರೆಕ್ಟಾದ ಟೈಮಿಂಗ್ ವಿದ್ಯುತ್ ಸರಬರಾಜು ಮಾಡುವಂತೆ ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ರೀತಿ ಒಂದು ಸಿಸ್ಟಮೇಟಿಕ್ಕಾಗಿ ವಿದ್ಯುತ್ ಸರಬರಾಜು ಮಾಡುವುದಕ್ಕೆಂದೇ ಹೊಸ ವ್ಯವಸ್ಥೆಗಾಗಿ ನಾವು ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ.

ಶ್ರೀ ಎಂ. ವೀರಿಕಾರ್ಜುನ ಖರ್ಗೆ.—ಶ್ರೀ ರಾಮದಾಸ್‌ರವರು ಎತ್ತಿರುವ ಪ್ರಶ್ನೆ ಎಲ್ಲರಿಗೂ ಅಪ್ಲೈ ಆಗುವಂಥಾದ್ದು. ತಾವು ಹೇಳಿದ ಹಾಗೆ ರೆವಿನ್ಯೂ ವಿಲೇಜಸ್‌ಗೆ ಮಾತ್ರ ಎಲೆಕ್ಟ್ರಿಫಿಕೇಷನ್ ಮಾಡುವ ಕ್ರಮ ತೆಗೆದುಕೊಂಡಿದ್ದೀರಿ. ನಮ್ಮ ಕಡೆ ಕೆಲವು ಹ್ಯಾಮ್ಲೆಟ್ಸ್ ವಿಲೇಜಸ್ ಏನಿವೆ ಅಲ್ಲಿ ವಿದ್ಯುತ್ ಕಡಿತ ಮಾಡಿದರೆ ತೊಂದರೆಯಾಗುತ್ತದೆ. ಒಂದೊಂದು ಹಳ್ಳಿಗಳಲ್ಲಿ ೪೦೦–೫೦೦ ಮನೆಗಳಿವೆ ಎರಡು ಸಾವಿರದವರೆಗೂ ಪಾಪುಲೇಷನ್ ಇದ್ದರೂ ಕೂಡ ಆವನ್ನು ರೆವಿನ್ಯೂ ವಿಲೇಜಸ್‌ಗೆ ಸೇರಿಸಿಲ್ಲ. ರೆವಿನ್ಯೂ ವಿಲೇಜಸ್ ೧೫೦೦ ಇದ್ದರೆ, ೮೦೦ ಹ್ಯಾಮ್ಲೆಟ್ಸ್ ಇವೆ. ತಾಂಡಗಳನ್ನು ಬಿಟ್ಟು ನಾನು ಹೇಳುತ್ತಿರುವುದು. ಅಂಥಾ ಮೇನ್ ವಿಲೇಜಸ್ ಬಗ್ಗೆ ಏನು ಕಾರ್ಯಕ್ರಮ ಇದೆ ಹೇಳಿ ?

ಶ್ರೀ ಲಕ್ಷ್ಮೀನರಸಿಂಹಯ್ಯ —ನಾವು ೧೯೭೧ ನೇ ಇಸವಿ ಸೆನ್ಸಸ್ ಪ್ರಕಾರ ನಿಗದಿಮಾಡಿದ ಎಲ್ಲಾ ರೆವೆನ್ಯೂ ವಿಲೇಜಸ್‌ಗೂ ವಿದ್ಯುತ್‌ನ್ನು ಕೊಟ್ಟಿದ್ದೇವೆ. ೧೯೮೧ ನೇ ಇಸವಿಯಾಲ್ಲಿ ಮತ್ತೆ ಸೆನ್ಸಸ್ ಮಾಡಿ ೬೮೦ ಹಳ್ಳಿಗಳನ್ನು ಸೇರಿಸಿದ್ದಾರೆ. ಸಾಮಾನ್ಯವಾಗಿ ತಾವು ಹೇಳಿದಂಥ ವಿಲೇಜಸೆಲ್ಲ ಮೇನ್ ವಿಲೇಜಸ್‌ನಲ್ಲಿ ಬರುತ್ತವೆ. ಅವುಗಳಿಗೆ ಈ ವರ್ಷದ ಕೊನೆಯಲ್ಲಿ ವಿದ್ಯುತ್‌ನ್ನು ಸಂಪೂರ್ಣ ನೀಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ. ಕಾರಣಾಂತರಗಳಿಂದ ಸೇರದೇ ಇರುವ ೨೧೦೦ ಕ್ಕಿಂತ ಜನಸಂಖ್ಯೆ ಜಾಸ್ತಿ ಇರುವ ಹಳ್ಳಿಗಳಿದ್ದರೆ ಹೇಳಿ ಅವಕ್ಕೆ ವಿದ್ಯುತ್‌ನ್ನು ಒದಗಿಸಿಕೊಡುತ್ತೇನೆ.

## ಅರಣ್ಯ ಸಂಪನ್ಮೂಲಗಳಿಂದ ಆದಾಯ

೧೩೯೦. ಶ್ರೀ ಜಿ. ರಾಜುಗೌಡ, (ಹನೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶವು ವಿಸ್ತೀರ್ಣವೆಷ್ಟು ?

ಆ) ಈ ಪ್ರದೇಶಗಳನ್ನು ಎಷ್ಟು ವಿಭಾಗಗಳಾಗಿ ವಿಂಗಡಿಸಲಾಗಿದೆ ?

ಇ) ೧೯೮೬-೮೭ ಹಾಗೂ ೧೯೮೭-೮೮ನೇ ಸಾಲಿನಲ್ಲಿ ಅರಣ್ಯ ಪ್ರದೇಶದಿಂದ ವಿವಿಧ ಮೂಲಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು ?

ಈ) ಆಡಳಿತಕ್ಕೆ ಸಂಬಂಧಪಟ್ಟ ವೆಚ್ಚವೆಷ್ಟು ?

ಶ್ರೀ ಜಿ.ಎಸ್. ಬಾಗಲ್‌ಕೋಟೆ (ಅರಣ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ೩೮,೬೪೪ ಚದರ ಕಿಲೋಮೀಟರುಗಳು.

ಆ) ಆಡಳಿತಾತ್ಮಕ ದೃಷ್ಟಿಯಿಂದ ಈ ಅರಣ್ಯ ಪ್ರದೇಶಗಳನ್ನು ೩೩ ವಿಭಾಗಗಳಾಗಿ ವಿಂಗಡಿಸಲಾಗಿದೆ.

ಇ) ವಿವಿಧ ಮೂಲಗಳಿಂದ ಅರಣ್ಯ ಇಲಾಖೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯ ಈ ಕೆಳಕಂಡಂತಿರುತ್ತದೆ. ೧೯೮೬-೮೭ ರೂ. ೫೪,೨೮,೨೨,೬೪೬-೦೦ ೧೯೮೭-೮೮ ರೂ. ೫೧,೭೬,೭೦,೩೬೧-೮೧. (ಮಾರ್ಚ್ ಪ್ರಿಲಿಮಿನರಿ)

ಈ) ಆಡಳಿತಕ್ಕೆ ಸಂಬಂಧಪಟ್ಟ ವೆಚ್ಚ ೧೯೮೬-೮೭ ಮತ್ತು ೮೭-೮೮ನೇ ಸಾಲಿನಲ್ಲಿ ಈ ಕೆಳಕಂಡಂತಿರುತ್ತದೆ.

೧೯೮೬-೮೭ ರೂ. ೧೯,೩೫,೨೨,೮೬೩-೦೦

೧೯೮೭-೮೮ ರೂ. ೧೮,೦೯,೩೭,೦೦೦-೦೦